# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2015–16ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಗತ್ಯವಿರುವ ಹೆಚ್ಚುವರಿ ಅನುದಾನ ನೀಡುವ ಕುರಿತು – "ಯುವ ಕ್ರೀಡಾ ಮಿತ್ರ ಯೋಜನೆ".

ಓದಲಾಗಿದೆ:
1) ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 209 ವೆಚ್ಚ–7/2015, ದಿನಾಂಕ: 16.04.2015.

2) ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ: ಡಿವೈಇಎಸ್/ಯುವೀ/ಯುಚೇ/ಕ್ರೀ.ಮಿ/07/2015–16, ದಿನಾಂಕ: 29.04.2015.

No. | Date 4-6-2015 | Office/Section D.D(Y.P) | Director

******

**ಪ್ರಸ್ತಾವನೆ:**

2015–16ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ (ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದ ಕಂಡಿಕೆ 294) ಘೋಷಿಸಿರುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು "ಯುವ ಕ್ರೀಡಾ ಮಿತ್ರ ಯೋಜನೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ನಿರ್ದೇಶಕರು ತಿಳಿಸಿರುತ್ತಾರೆ.

ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಕ್ರೀಡಾ ಸಂಸ್ಕೃತಿಯನ್ನು ಬೆಳೆಸಲು ಕ್ರೀಡಾ ಸಂಘಗಳ ಸ್ಥಾಪನೆಗೆ ಒತ್ತು ನೀಡಬೇಕಾಗಿದ್ದು, ಈ ನಿಟ್ಟಿನಲ್ಲಿ ಪ್ರತಿ ಹೋಬಳಿಗೊಂದು ಯುವ ಕ್ರೀಡಾ ಸಂಘವನ್ನು ಸ್ಥಾಪಿಸಲು ಸ್ಥಳೀಯ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವುದು ಅಗತ್ಯವಾಗಿದೆ. ಸದರಿ ಯುವ ಕ್ರೀಡಾ ಸಂಘಗಳಿಗೆ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸಲು ಮತ್ತು ಪ್ರತಿಭೆಗಳನ್ನು ಗುರುತಿಸಿ ಕ್ರೀಡಾ ಶಾಲೆ/ನಿಲಯಗಳಿಗೆ ಕಳುಹಿಸಲು ಪ್ರೋತ್ಸಾಹ ಧನವಾಗಿ ಪ್ರತಿ ಹೋಬಳಿಯ ಒಂದು ಸಂಘಕ್ಕೆ ವಾರ್ಷಿಕ ತಲಾ ರೂ. 0.25 ಲಕ್ಷಗಳನ್ನು ನೀಡಲಾಗುವುದಲ್ಲದೇ ಈ ಕಾರ್ಯಕ್ರಮವನ್ನು ರಾಜ್ಯದ 777 ಹೋಬಳಿಗಳಲ್ಲಿ ಅನುಷ್ಠಾನಗೊಳಿಸಲು ಒಟ್ಟು ರೂ. 194.25 ಲಕ್ಷಗಳ ಹೆಚ್ಚುವರಿ ಅನುದಾನದ ಅವಶ್ಯಕತೆ ಇರುತ್ತದೆಯೆಂದು ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮೇಲೆ ಓದಲಾದ (2)ರ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ (1)ರ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ 2015–16ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದ ಕಂಡಿಕೆ–294ರ "ಯುವ ಕ್ರೀಡಾ ಮಿತ್ರ ಯೋಜನೆ" ಕಾರ್ಯಕ್ರಮ ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ 2204–00–104–0–32 ಗ್ರಾಮೀಣ ಕ್ರೀಡೆ ಮತ್ತು ಪಂದ್ಯಗಳು ಅಡಿಯಲ್ಲಿ ಒದಗಿಸಿರುವ ರೂ. 734.00 ಲಕ್ಷಗಳಲ್ಲಿ, ರೂ. 194.25 ಲಕ್ಷಗಳನ್ನು ಭರಿಸಿಕೊಂಡು ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 242 ಯುಸೇಕ್ರೀ 2015,**

**ಬೆಂಗಳೂರು, ದಿನಾಂಕ: 03-06-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದಂತೆ ಪ್ರಸ್ತಾವನೆಯಲ್ಲಿ ತಿಳಿಸಿರುವ ಹೊಸ ಯೋಜನೆಗಳ ಪೈಕಿ, ಒಂದಾಗಿರುವ "**ಯುವ ಕ್ರೀಡಾ ಮಿತ್ರ ಯೋಜನೆ**"ಯ ಅನುಷ್ಠಾನಕ್ಕಾಗಿ ಆರ್ಥಿಕ ಇಲಾಖೆಯು ನಿಗದಿಪಡಿಸಿರುವ ಅನುದಾನದ ಮಿತಿಯಲ್ಲಿ, ಅನುದಾನವನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಂಡು, ಈ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ ಮಾರ್ಗಸೂಚಿಯಂತೆ ಕ್ರಮ ವಹಿಸಲು ಈ ಮೂಲಕ ಸಹಮತಿಸಿ ಆದೇಶಿಸಿದೆ.

ಸದರಿ ವೆಚ್ಚವನ್ನು 2015-16ನೇ ಸಾಲಿನ ಲೆಕ್ಕಶೀರ್ಷಿಕೆ 2204-00-104-0-32 ಗ್ರಾಮೀಣ ಕ್ರೀಡೆ ಮತ್ತು ಪಂದ್ಯಗಳು ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 505 ವೆಚ್ಚ-7/2015, ದಿನಾಂಕ: 21.05.2015 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಯೋಇ 54 ಜಆ 2015, ದಿನಾಂಕ: 25.05.2015ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ. ಹನುಮಂತರಾಯಪ್ಪ 3/6/2015
(ಜಿ.ಹನುಮಂತರಾಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಗೆ:

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಪಿ.ಬಿ. ನಂ.5329, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಜಿ&ಎಸ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಇ&ಆರ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5398, ಬೆಂಗಳೂರು.
4. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
5. ಖಜಾನಾಧಿಕಾರಿಗಳು ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
7. ಉಪ ನಿರ್ದೇಶಕರು, ಟಿ.ಎಸ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
9. ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7/8), ವಿಧಾನಸೌಧ, ಬೆಂಗಳೂರು.
11. ಮಾನ್ಯ, ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
13. ಸರ್ಕಾರದ ಉಪ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಸಹಾಯಕರು.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಯುವ ಕ್ರೀಡಾ ಮಿತ್ರ ಯೋಜನೆ

(ಯುವ ಕ್ರೀಡಾ ಸಂಘ-ಸಂಸ್ಥೆಗಳಿಗೆ ಸಹಾಯಾನುದಾನ ಯೋಜನೆ)

ಪೀಠಿಕೆ:

ಕ್ರೀಡೆಯನ್ನು ಅಭಿವೃದ್ಧಿಗೊಳಿಸಲು ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಕ್ರೀಡಾಪಟುಗಳು ಹೆಚ್ಚಿನ ಸಾಧನೆಯನ್ನು ಮಾಡಲು ಅತೀ ಮುಖ್ಯವಾಗಿ ಪ್ರತಿಭಾವಂತ ಕ್ರೀಡಾಪಟುಗಳನ್ನು ಎಳೆಯ ವಯಸ್ಸಿನಲ್ಲಿ ಗುರುತಿಸಿ, ವೈಜ್ಞಾನಿಕ ತರಬೇತಿ ನೀಡುವುದು ಬಹು ಮುಖ್ಯವಾಗಿದೆ. ರಾಜ್ಯವು ಭೌಗೋಳಿಕವಾಗಿ ವಿವಿಧ ರೀತಿಯ ವಾತಾವರಣ ಮತ್ತು ಆಹಾರ ಪದ್ಧತಿಗಳನ್ನು ಹೊಂದಿದ್ದು, ವಿವಿಧ ಕ್ರೀಡೆಗಳು ಆಯಾ ಪ್ರದೇಶದಲ್ಲಿ ಪ್ರಚಲಿತವಾಗಿವೆ ಮತ್ತು ವಿವಿಧ ಕ್ರೀಡೆಗಳಲ್ಲಿ ಕ್ರೀಡಾಪಟುಗಳು ಆಯಾ ಭಾಗಗಳಿಂದ ಹೊರ ಹೊಮ್ಮುತ್ತಿದ್ದಾರೆ. ಈ ವಿಷಯಕ್ಕೆ ಪೂರಕವಾಗಿ ಎಂಬಂತೆ ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಸೈಕ್ಲಿಂಗ್, ಮಡಿಕೇರಿ ಜಿಲ್ಲೆಯಲ್ಲಿ ಹಾಕಿ, ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಥ್ಲೆಟಿಕ್ಸ್, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಕುಸ್ತಿ ಮುಂತಾದವುಗಳು, ಹೀಗೆ ವಿವಿಧ ಕ್ರೀಡೆಗಳಲ್ಲಿ ರಾಜ್ಯದ ವಿವಿಧ ಭಾಗಗಳ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ.

ಕರ್ನಾಟಕ ರಾಜ್ಯವು 2015 ರಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 11 ನೇ ಸ್ಥಾನ ಪಡೆದಿರುವುದು ಕ್ರೀಡೆಯನ್ನು ತಳಹಂತದಲ್ಲಿ ಹೆಚ್ಚು ಬಲಪಡಿಸುವ ಅಗತ್ಯತೆಯನ್ನು ಸಾರುತ್ತದೆ. ಅಲ್ಲದೇ ಎಳೆಯ ವಯಸ್ಸಿನಲ್ಲಿ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ನಿರಂತರವಾಗಿ ವೈಜ್ಞಾನಿಕ ತರಬೇತಿಯನ್ನು ನೀಡಿ ಹೆಚ್ಚಿನ ಸಾಧನೆಯನ್ನು ಮಾಡಲು ಪ್ರೋತ್ಸಾಹ ನೀಡುವ ಅವಶ್ಯಕತೆ ಇದೆ. ರಾಜ್ಯದಲ್ಲಿ ರಾಷ್ಟ್ರೀಯ ಮತ್ತು ಉನ್ನತ ಮಟ್ಟದಲ್ಲಿ ಸಾಧನೆ ಮಾಡಿದ ಯುವ ಕ್ರೀಡಾಪಟುಗಳ ದೊಡ್ಡ ಸಂಖ್ಯೆಯೇ ಇದೆ. ಅದೇ ರೀತಿ ರಾಜ್ಯ ಮತ್ತು ರಾಷ್ಟ್ರದ ಕ್ರೀಡಾ ಪ್ರಶಸ್ತಿಗಳಾದ ಏಕಲವ್ಯ, ಕರ್ನಾಟಕ ಕ್ರೀಡಾ ರತ್ನ, ಅರ್ಜುನ, ದ್ರೋಣಾಚಾರ್ಯ, ಧ್ಯಾನ್‌ಚಂದ್ ಪ್ರಶಸ್ತಿಗಳನ್ನು ಕ್ರೀಡಾಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ಪಡೆದ ಹಿರಿಯ ಕ್ರೀಡಾಪಟುಗಳ ದೊಡ್ಡ ಪಟ್ಟಿಯೇ ಇದೆ. ಇವರೆಲ್ಲ ರಾಜ್ಯದ ವಿವಿಧ ಭಾಗಗಳಲ್ಲಿ ವಾಸವಿದ್ದು ತಮ್ಮದೇ ರೀತಿಯಲ್ಲಿ ಕ್ರೀಡೆಗೆ ಪ್ರೋತ್ಸಾಹ ಮತ್ತು ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಂತಹ ಕ್ರೀಡಾಪಟುಗಳು

...2

[illegible] ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ, ತರಬೇತಿ ನೀಡಿ [illegible] ಕಳುಹಿಸುವ ಕಾರ್ಯದಲ್ಲಿ ಕೈಜೋಡಿಸಲು ಯುವಕ [illegible] [illegible] ಕ್ರೀಡಾಪಟುಗಳ ತರಬೇತಿಗೆ ಅವಶ್ಯಕವಾದ ಕ್ರೀಡಾಸಲಕರಣೆಗಳನ್ನು ಮತ್ತು ಇತರೆ ಪ್ರತಿಭಾವಂತ ಕ್ರೀಡಾಪಟುಗಳಿಗೆ ಕ್ರೀಡಾಸಾಧನೆಗೆ ಅಗತ್ಯವಾದ ಕ್ರೀಡಾ ಸಮವಸ್ತ್ರ, ಷೂ ಇತ್ಯಾದಿ ಗಳನ್ನು ಪೂರೈಸುವುದು ಈ ಯೋಜನೆಯ ಉದ್ದೇಶವಾಗಿದೆ.

1. ಯೋಜನೆಯ ಗುರಿ ಮತ್ತು ಉದ್ದೇಶ:

3. ವಿಧಾನ:

- ಹೋಬಳಿಯನ್ನು ಘಟಕವನ್ನಾಗಿಸಿಕೊಂಡು ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸುವುದು
- ಹಿಂದಿನ ಮೂರು ವರ್ಷಗಳಲ್ಲಿ ಕ್ರೀಡಾಸ್ಪರ್ಧೆಗಳನ್ನು ಆಯೋಜಿಸಿ ಅನುಭವ ಇರುವ ಯುವ ಕ್ರೀಡಾ ಸಂಘಗಳಿಗೆ ಆದ್ಯತೆ ನೀಡುವುದು
- ಏಕಲವ್ಯ, ಕರ್ನಾಟಕ ಕ್ರೀಡಾ ರತ್ನ, ಅರ್ಜುನ, ಧ್ಯಾನ್‌ಚಂದ, ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಅಥವಾ ರಾಷ್ಟ್ರೀಯ ಮತ್ತು ಉನ್ನತ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ಇರುವ ಕ್ರೀಡಾ ಸಂಘಗಳಿಗೆ ಆದ್ಯತೆ ನೀಡುವುದು
- ವಿವಿಧ ಕ್ರೀಡಾ ಸಂಸ್ಥೆಗಳು, ಇಲಾಖೆಗಳು ಆಯೋಜಿಸುವ ಕ್ರೀಡಾಕೂಟಗಳಲ್ಲಿ ವಿಜೇತರಾದ ಯುವ ಪ್ರತಿಭಾವಂತ ಕ್ರೀಡಾಪಟುಗಳಿಗೆ ಕ್ರೀಡಾ ಸಮವಸ್ತ್ರ, ಷೂ, ಇತ್ಯಾದಿ ಗಳನ್ನು ಒದಗಿಸುವುದು

4. ಕಾರ್ಯಚಟುವಟಿಕೆಯ ದಾಖಲಾತಿಗಳು:

- ಸ್ಥಳೀಯ ಕ್ರೀಡಾಪಟುಗಳಿಗಾಗಿ ಕ್ರೀಡಾಕೂಟಗಳನ್ನು ಆಯೋಜಿಸಿರುವ ವರದಿ
- ಸ್ಥಳೀಯ ಪ್ರತಿಭಾವಂತ ಕ್ರೀಡಾಪಟುಗಳ ವಿವರಗಳ ಪಟ್ಟಿ
- ಕ್ರೀಡಾಪಟುಗಳಿಗಾಗಿ ಆಯೋಜಿಸಿರುವ ವಿಶೇಷ ಕ್ರೀಡಾ ಶಿಬಿರಗಳು, ಕ್ರೀಡಾ ಸಂಸ್ಥೆಗಳು ಆಯೋಜಿಸುವ ಕ್ರೀಡಾಕೂಟಗಳಲ್ಲಿ ಭಾಗಿಯಾಗಿರುವ ಬಗ್ಗೆ ವರದಿ ಇತ್ಯಾದಿ

...3

- ಹಿಂದಿನ ಸಾಲುಗಳಲ್ಲಿ ಅರ್ಹ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ ಕ್ರೀಡಾಶಾಲೆಗೆ ಕಳುಹಿಸಿರುವ ಮಾಹಿತಿಯ ವಿವರ.
- ಸಂಘದಲ್ಲಿ ಏಕಲವ್ಯ, ಕರ್ನಾಟಕ ಕ್ರೀಡಾ ರತ್ನ, ಅರ್ಜುನ, ಧ್ಯಾನಚಂದ, ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಅಥವಾ ರಾಷ್ಟ್ರೀಯ ಮತ್ತು ಉನ್ನತ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ಇರುವ ಬಗ್ಗೆ ವರದಿ.

5. ಆಯ್ಕೆ:

- ಇಲಾಖೆಯ ಉಪ/ಸಹಾಯಕ ನಿರ್ದೇಶಕರು ಪ್ರತಿ ಹೋಬಳಿಗೆ ಒಂದು ಅರ್ಹ ಯುವಜನ/ಯುವಜನೇತರ ಕ್ರೀಡಾ ಸಂಘ-ಸಂಸ್ಥೆಗಳನ್ನು ಆಯ್ಕೆ ಮಾಡಿ ನಿರ್ದೇಶನಾಲಯಕ್ಕೆ ಅಂತಿಮ ಆಯ್ಕೆಗೆ ಕಳುಹಿಸುವುದು.
- ಪ್ರಸ್ತಾವನೆಗಳನ್ನು ನಿರ್ದೇಶನಾಲಯದಲ್ಲಿ ಪ್ರತಿ ಜಿಲ್ಲೆಯ ಉಸ್ತುವಾರಿಗೆ ಇಲಾಖೆಯ ಮಾನ್ಯ ನಿರ್ದೇಶಕರಿಂದ ನೇಮಿಸಲ್ಪಟ್ಟ ಹಿರಿಯ ಅಧಿಕಾರಿ ಗಳು ಪರಿಶೀಲಿಸುವುದು.
- ಇಲಾಖೆಯ ನಿರ್ದೇಶಕರು ಅರ್ಹ ಯುವಜನ/ಯುವಜನೇತರ ಕ್ರೀಡಾ ಸಂಘ-ಸಂಸ್ಥೆಗಳನ್ನು ಅಂತಿಮವಾಗಿ ಆಯ್ಕೆ ಮಾಡಲಿದ್ದು, ನಿರ್ದೇಶಕರ ಆಯ್ಕೆಯೇ ಅಂತಿಮವಾಗಿರುತ್ತದೆ.

6. ನಿಯಮ ನಿಬಂಧನೆಗಳು:

- ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸುತ್ತಿರುವ ಕ್ರಿಯಾಶೀಲ ಯುವ ಸಂಘಗಳನ್ನು ಕ್ರೀಡಾ ಸಂಘಗಳೆಂದು ಮತ್ತು ಇತರೆ ಸಂಸ್ಥೆಗಳನ್ನು ಯುವಜನೇತರ ಕ್ರೀಡಾ ಸಂಸ್ಥೆಗಳೆಂದು ಪರಿಗಣಿಸುವುದು
- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಯುವಜನ/ಯುವಜನೇತರ ಸಂಘ/ಸಂಸ್ಥೆ ಎಂದು ಮಾನ್ಯತೆ ಪಡೆದಿರಬೇಕು.

- ಹಿಂದಿನ ಮೂರು ವರ್ಷಗಳಿಂದ ಕ್ರಿಯಾಶೀಲವಾಗಿರುವ ಯುವಜನ/ಗ್ರಾಮಾಂತರ ಯುವ/ಕ್ರೀ... ಸಂಘ ಸಂಸ್ಥೆಗಳಿಗೆ ಆದ್ಯತೆ.
- ಏಕಲವ್ಯ, ಕರ್ನಾಟಕ ಕ್ರೀಡಾ ರತ್ನ, ಅರ್ಜುನ, ಧ್ಯಾನ್‌ಚಂದ್, ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಅಥವಾ ರಾಷ್ಟ್ರೀಯ ಮತ್ತು ಉನ್ನತ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ಇರುವ ಸಂಘಗಳಿದ್ದಲ್ಲಿ ಅವುಗಳನ್ನೇ ಪರಿಗಣಿಸುವುದು
- ನಕಾರಾತ್ಮಕ ಧೋರಣೆ ಇರುವ ಹಾಗೂ ಭಾರತದ ಸಂವಿಧಾನದ ಮೌಲ್ಯಗಳಿಗೆ ವಿರುದ್ಧವಾದ ಚಟುವಟಿಕೆ ನಡೆಸುವ ಮತ್ತು ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಅಥವಾ ಸರ್ಕಾರದ ವಿವಿಧ ಅಂಗ ಸಂಸ್ಥೆಗಳಿಂದ ಕಪ್ಪು ಪಟ್ಟಿಗೆ ಸೇರಿಸಲ್ಪಟ್ಟ ಕ್ರೀಡಾ ಸಂಘ ಸಂಸ್ಥೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ
- ಪ್ರತಿ ಹೋಬಳಿಯ ಕ್ರೀಡಾ ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲೇಬೇಕೆಂಬುದು ಕಡ್ಡಾಯವಲ್ಲ ಯಾವುದೇ ಒಂದು ಹೋಬಳಿಯಲ್ಲಿ ಅರ್ಹ ಸಂಘಗಳು ಇಲ್ಲವಾದಲ್ಲಿ ಪಕ್ಕದ ಹೋಬಳಿಯಲ್ಲಿರುವ ಒಂದಕ್ಕಿಂತ ಹೆಚ್ಚು ಅರ್ಹ ಕ್ರೀಡಾ ಸಂಘ ಸಂಸ್ಥೆಗಳಿಗೆ ಅನುದಾನ ನೀಡಲು ಅವಕಾಶವಿದೆ ಇಲ್ಲವೇ ಗರಿಷ್ಠ ಪ್ರತಿ ತಾಲ್ಲೂಕಿನ ಹೋಬಳಿಗಳಲ್ಲಿ ಕ್ರೀಡೆಯ ಬೆಳವಣಿಗೆಗಾಗಿ ಕಾರ್ಯ ನಿರ್ವಹಿಸುತ್ತಿರುವ ಒಂದು ಕ್ರೀಡಾ ಸಂಘಕ್ಕೆ ಹೋಬಳಿಗಳ ಸಂಖ್ಯೆಗಳಿಗನುಗುಣವಾಗಿ ಒಟ್ಟು ಸಹಾಯಾನುದಾನ ನೀಡಬಹುದಾಗಿದೆ ಅಥವಾ ಅನುದಾನವನ್ನು ಆಯಾ ಹೋಬಳಿಯ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅಗತ್ಯವಾದ ಕ್ರೀಡಾ ಸಲಕರಣೆ, ಕ್ರೀಡಾ ಸಮವಸ್ತ್ರ, ಷೂ ಇತ್ಯಾದಿಗಳನ್ನು ಒದಗಿಸಲು ವಿನಿಯೋಗಿಸಬಹುದಾಗಿದೆ

7. ಘಟಕ ವೆಚ್ಚ

- ಹೋಬಳಿಯ ಒಂದು ಕ್ರೀಡಾ ಸಂಘ ಸಂಸ್ಥೆಗೆ ಗರಿಷ್ಠ ರೂ 25,000-00 ಗಳ ವಾರ್ಷಿಕ ಪ್ರೋತ್ಸಾಹಧನ ನೀಡಲು ಅಥವಾ ರೂ 25,000-00 ಗಳನ್ನು ವಿವಿಧ ಕ್ರೀಡಾ ಸಂಸ್ಥೆಗಳು, ಇಲಾಖೆಗಳು ಆಯೋಜಿಸುವ ಕ್ರೀಡಾಕೂಟಗಳಲ್ಲಿ ವಿಜೇತರಾದ ಹೋಬಳಿಯ/ತಾಲ್ಲೂಕಿನ ಯುವ ಪ್ರತಿಭಾವಂತ ಕ್ರೀಡಾಪಟುಗಳಿಗೆ

ಹೆಚ್ಚಿನ ಸಾಧನೆಗೆ ಪೂರಕವಾದ ಕ್ರೀಡಾ ಸಲಕರಣೆ, ಕ್ರೀಡಾ ಸಮವಸ್ತ್ರ, ಶೂ, ಇತ್ಯಾದಿ ಗಳನ್ನು ಒದಗಿಸಲು ವಿನಿಯೋಗಿಸಬಹುದಾಗಿದೆ.

## ೯. ಫಲಶೃತಿ

- ಕ್ರೀಡಾಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಗಾಗಿ ಸರ್ಕಾರದ ಪ್ರಯತ್ನಕ್ಕೆ ಹಿರಿಯ ಹಾಗೂ ಕ್ರೀಡೆಯಲ್ಲಿ ಉನ್ನತ ಸಾಧನೆ ಮಾಡಿದ ಕ್ರೀಡಾಪಟುಗಳ ಭಾಗವಹಿಸುವಿಕೆಯಿಂದ ಬೆಂಬಲ
- ಗ್ರಾಮೀಣ ಪ್ರದೇಶದ ಕ್ರೀಡಾ ಪ್ರತಿಭೆಗಳ ಗುರುತಿಸುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ
- ಸರ್ಕಾರದ ಸವಲತ್ತುಗಳನ್ನು ಅರ್ಹ ಪ್ರತಿಭಾವಂತ ಕ್ರೀಡಾಪಟುಗಳಿಗೆ ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ಹೆಚ್ಚಿನ ಯಶಸ್ಸು
- ಅರ್ಹ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ತರಬೇತಿ ನೀಡುವುದರಿಂದ ಮುಂದಿನ ವರ್ಷಗಳಲ್ಲಿ ರಾಜ್ಯದ ಸಾಧನೆಯು ಕ್ರೀಡಾಕ್ಷೇತ್ರದಲ್ಲಿ ಗಣನೀಯವಾಗಿ ಹೆಚ್ಚುವುದು.
- ಹೋಬಳಿ ಮಟ್ಟದಲ್ಲಿ ಉತ್ತಮ ಗುಣಮಟ್ಟದ ಕ್ರೀಡಾ ಸಲಕರಣೆಗಳು ಯುವ ಪ್ರತಿಭಾವಂತ ಕ್ರೀಡಾಪಟುಗಳಿಗೆ ಲಭ್ಯವಾಗುವುದು.

ಜಿ. ಹನುಮಂತರಾಯಪ್ಪ 3/6/2015
(ಜಿ.ಹನುಮಂತರಾಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ